# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

ರಾಷ್ಟ್ರೀಯ ಸೇವಾ ಯೋಜನೆ

ದೂರವಾಣಿ ಸಂ: (0831) 2405468

ಕುಲಸಚಿವರು

ಫ್ಯಾಕ್ಸ್ ಸಂ : (0831) 2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ನಿಮ್ಹಾನ್ಸ್/36/2022-23/880. ದಿನಾಂಕ: 01 JUN 2023

**:ಸುತ್ತೋಲೆ:**

**ವಿಷಯ:** ಜೀವನ ಕೌಶಲ್ಯ ತರಬೇತಿಗೆ ಎನ್.ಎಸ್.ಎಸ್.ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

**ಉಲ್ಲೇಖ:** ಯುಸೇಇ/ರಾಸೇಯೋ/33/2021/2023-24/94 ದಿನಾಂಕ: 30.05.2023

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರಿಗೆ ನಿಮ್ಹಾನ್ಸ್ ಸಹಯೋಗದೊಂದಿಗೆ ಎನ್.ಎಸ್.ಎಸ್. ಯೋಜನಾಧಿಕಾರಿಗಳ ಮೂಲಕ ಜೀವನ ಕೌಶಲ್ಯ ಮತ್ತು ಆಪ್ತ ಸಲಹೆ ತರಬೇತಿಯ ಹೊಸ ಯೋಜನೆಯನ್ನು ಘೋಷಿಸಿದ್ದಾರೆ. ಅದರಂತೆ 2023-24ನೇ ಸಾಲಿನಲ್ಲಿಯೂ ಇದನ್ನು ಮುಂದುವರಿಸಿದ್ದು, ನಿಮ್ಹಾನ್ಸ್ ಸಂಸ್ಥೆಯ ಈ ಕೆಳಗಿನ ದಿನಗಳಲ್ಲಿ ತರಬೇತಿ ಕಾರ್ಯಕ್ರಮವನ್ನು ನಡೆಸಲಿದೆ.

| ಇಂದ | ರವರೆಗೆ |
|---|---|
| 12.06.2023 | 17.06.2023 |
| 10.07.2023 | 15.07.2023 |
| 31.07.2023 | 05.08.2023 |
| 21.08.2023 | 26.08.2023 |
| 11.09.2023 | 16.09.2023 |
| 20.11.2023 | 25.11.2023 |
| 11.12.2023 | 16.12.2023 |
| 18.12.2023 | 23.12.2023 |
| 01.01.2024 | 06.01.2024 |
| 29.01.2024 | 03.02.2024 |
| 12.02.2024 | 17.02.2024 |
| 26.02.2024 | 02.03.2024 |
| 11.03.2024 | 16.03.2024 |
| 18.03.2024 | 23.03.2024 |

ಕಾರ್ಯಕ್ರಮವು ಲೆಕ್ಚರ್ ಹಾಲ್-1, ಎಪಿಡೀಮಿಯಾಲಜಿ ವಿಭಾಗ, ಜನ ಆರೋಗ್ಯ ಕೇಂದ್ರ, ನಿಮ್ಹಾನ್ಸ್ ಬೆಂಗಳೂರುನಲ್ಲಿ ನಡೆಯಲಿದೆ. ಸದರಿ ಕಾರ್ಯಕ್ರಮಕ್ಕೆ ಎನ್.ಎಸ್.ಎಸ್.ಯೋಜನಾಧಿಕಾರಿ ಅಲ್ಲದಿದ್ದರೂ ಆಸಕ್ತಿ ಇರುವ ಇತರ ಅಧ್ಯಾಪಕರನ್ನು ನಿಯೋಜಿಸಬಹುದಾಗಿದೆ. ತರಬೇತಿ ಪಡೆದ ಅಧ್ಯಾಪಕರು ನಂತರ ಸ್ವಯಂಸೇವಕರಿಗೆ ತರಬೇತಿ ನೀಡಬೇಕಾಗುತ್ತದೆ. ವಸತಿ, ಊಟ ಮತ್ತು ಪ್ರಯಾಣ ವೆಚ್ಚವನ್ನು ನಿಮ್ಹಾನ್ಸ್ ಬೆಂಗಳೂರು ಇವರ ನೀಡುತ್ತಾರೆ. ಕಳೆದ ಸಾಲಿನಲ್ಲಿ ತರಬೇತಿಯಲ್ಲಿ ಭಾಗವಹಿಸಿದ ಎನ್.ಎಸ್.ಎಸ್. ಅಧಿಕಾರಿಗಳು ಹಾಗೂ ಅಧ್ಯಾಪಕರು ತರಬೇತಿಯ ಬಗ್ಗೆ ಅತ್ಯಂತ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತರಬೇತಿ ಹೊಂದಿದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು ಅಥವಾ ಅಧ್ಯಾಪಕರು ತಮ್ಮ ಸುತ್ತಮುತ್ತಲಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನಡೆಸಬಹುದಾಗಿದೆ. ಈ ಮೇಲಿನ ತರಬೇತಿ ಕಾರ್ಯಕ್ರಮಕ್ಕೆ ತಮ್ಮ ಮಹಾವಿದ್ಯಾಲಯದಿಂದ ಕಾರ್ಯಕ್ರಮಾಧಿಕಾರಿ/ ಆಸಕ್ತಿ ಇರುವ ಇತರೆ ವಿಭಾಗದ ಅಧ್ಯಾಪಕರನ್ನು ನಿಯೋಜಿಸಬೇಕೆಂದು ಸೂಚಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಡಾ.ಪ್ರದೀಪ್ ಬಿ.ಎಸ್. ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್ ಇವರನ್ನು ಸಂಪರ್ಕಿಸಬಹುದಾಗಿದೆ. ತರಬೇತಿಯಲ್ಲಿ ಭಾಗವಹಿಸುವ ಯೋಜನಾಧಿಕಾರಿಗಳು/ಅಧ್ಯಾಪಕರ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿವರಗಳನ್ನು ಕಳುಹಿಸಲು ಕೋರಲಾಗಿದೆ. (ದೂರವಾಣಿ: ಡಾ.ಪ್ರದೀಪ್ ಬಿ.ಎಸ್. 9845452250, ಇ-ಮೇಲ್ doctorpradeepbs@gmail.com ಮತ್ತು ಶ್ರೀಮತಿ. ವಿದ್ಯಾ. ಟಿ. ಸಿ. -9741271777)

ವಂದನೆಗಳೊಂದಿಗೆ,

01/06/23

ಕುಲಸಚಿವರು

ಇವರಿಗೆ,

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು,
ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ
ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.